"ನನ್ನದೊಂದು ಅನುಭವವನ್ನು ನಿಮ್ಮ ಜೊತೆ ಹಂಚಿಕೊಳ್ಳಬೇಕು. ಕಲಿಸುವಾಗ ಸಾಮಾನ್ಯವಾಗಿ ಒಂದು ಕೃತಿಯ ಸಾಲನ್ನು ಹಾಡುತ್ತೇನೆ. ವಿದ್ಯಾರ್ಥಿಗಳು ರಿಪೀಟ್ ಮಾಡುತ್ತಾರೆ. ಆ ಸಾಲನ್ನು ನಾನು ಹತ್ತು ಸಲ ಹಾಡಿದರೂ ಕೆಲವರು ತಪ್ಪಾಗಿಯೇ ಹಾಡುತ್ತಿರುತ್ತಾರೆ. ಇದೇಕೆ ಹೀಗೆ? ನನಗೆ ಕೊನೆಗೆ ತಿಳಿಯಿತು. ನಾನು ಆ ಸಾಲನ್ನು ಹಾಡಲು ಪ್ರಾರಂಭಿಸಿದ ಕೂಡಲೆ ಅವರು ತಮ್ಮ ಮನಸ್ಸಿನಲ್ಲಿ ಹಾಡಿಕೊಳ್ಳಲು ಆರಂಭಿಸುತ್ತಾರೆ. ಹಾಗಾಗಿ ನಾನು ಹಾಡಿದ್ದನ್ನು ಅವರು ಕೇಳಿಸಿಕೊಳ್ಳುತ್ತಿರುವುದಿಲ್ಲ. ತಮ್ಮ ಮನಸ್ಸಿನ ಹಾಡನ್ನು ಕೇಳಿಸಿಕೊಳ್ಳುತ್ತಾ, ಅದನ್ನೇ ಹಾಡುತ್ತಿರುತ್ತಾರೆ. ಸಂಗೀತದಲ್ಲಿ ಹಾಡುವುದಕ್ಕಿಂತ ಕೇಳಿಸಿಕೊಳ್ಳುವುದು ಮುಖ್ಯ. ಇದು ಉಳಿದ ವಿಷಯಕ್ಕೂ ನಿಜ. ವಾಸ್ತವವಾಗಿ ನಾವು ನಮ್ಮ ಸುತ್ತಲಿನ ಧ್ವನಿಗಳನ್ನೂ ಕೇಳಿಸಿಕೊಳ್ಳುವುದಿಲ್ಲ. ನಮ್ಮ ಧ್ವನಿಯನ್ನಷ್ಟೇ ಕೇಳಿಸಿಕೊಳ್ಳುತ್ತಿರುತ್ತೇವೆ. ಅದನ್ನೇ ಉಳಿದವುಗಳ ಮೇಲೆಯೂ ಹೇರುತ್ತಿರುತ್ತೇವೆ."

ಹಾಗಾಗಿಯೇ ಕೃಷ್ಣ ಕೂತ್ತು, ಕೊಡಿಯಾಟ್ಟಂ ಪರ್ರೈಯಾಟ್ಟಂ ಕಲಾವಿದರ ಜೊತೆ, ಜೋಗತಿಯರ ಜೊತೆ ಪ್ರಯೋಗಗಳನ್ನು ಮಾಡಿದ್ದಾರೆ. ಕೂತ್ತು ಸಂಗೀತಕ್ಕೆ ಹಿನ್ನೆಲೆಯಾಗಿ ಕರ್ನಾಟಕ ಸಂಗೀತವನ್ನು ಹಾಡಿದ್ದಾರೆ. ಇದೊಂದು ರೀತಿಯಲ್ಲಿ ಸಾಮಾಜಿಕ ಹಾಗೂ ಸಂಗೀತಾತ್ಮಕ ಪ್ರಯೋಗ.

"ನಮ್ಮಲ್ಲಿ ಕೂತ್ತು ಎಂಬ ಸಂಪ್ರದಾಯವಿದೆ. ಅದನ್ನು ತೆರಕೂತ್ತು, ಕಟ್ಟೈ ಕೂತ್ತು ಎನ್ನುತ್ತಾರೆ. ಸಾಮಾನ್ಯವಾಗಿ ಇದನ್ನು ರಸ್ತೆಯಲ್ಲಿ ಕೆಲವೊಮ್ಮೆ ದೇವಾಲಯಗಳಲ್ಲಿ ಮಾಡುತ್ತಾರೆ. ಇದು ಮುಖ್ಯವಾಗಿ ದಲಿತರ ಕಲೆ. ನಾನು ಮೊದಲ ಬಾರಿ ಕೂತ್ತು ಸಂಗೀತವನ್ನು ಕೇಳಿದಾಗ ಅದರ ಬಗ್ಗೆ ದ್ವೇಷವುಂಟಾಗಿತ್ತು. ಅದು ಯಾವ ಮಾಧುರ್ಯವೂ ಇಲ್ಲದ ಕಿರುಚಾಟವಾಗಿ ತೋರಿತ್ತು. ಅವರು ಶ್ರುತಿಶುದ್ಧವಾಗಿ ಹಾಡುತ್ತಿರಲಿಲ್ಲ. ಕೂತ್ತು ತುಂಬಾ ಸುಮಾರಾಗಿದೆ ಎಂದು ನನ್ನ ಸಾಮಾಜಿಕ ಹಿನ್ನೆಲೆ ಹೇಳುತ್ತಿತ್ತು. ನನಗದು ಇಷ್ಟವಾಗಿರಲಿಲ್ಲ. ಅಂದರೆ ನಾನದನ್ನು ಕೇಳಿಸಿಕೊಳ್ಳುತ್ತಿರಲಿಲ್ಲ. ಅನಂತರ ದೇಶದಲ್ಲೇ ಅತ್ಯುತ್ತಮ ಕೂತ್ತು ಕಲಾವಿದರಾಗಿದ್ದ ರಾಜಗೋಪಾಲ್ ಜೊತೆ ಕೆಲಸ ಮಾಡಲಾರಂಭಿಸಿದೆ. ಒಂದು ದಿನ ಸಣ್ಣ ಮಕ್ಕಳು ಮಾಡುತ್ತಿದ್ದ 'ಅಭಿಮನ್ಯುವಧಾ ಪ್ರಕರಣ' ನೋಡುತ್ತಿದ್ದೆ. ಅದು ಅವರ ಮೊದಲ ಪ್ರದರ್ಶನ. ಅದು ನಡುರಾತ್ರಿ ಪ್ರಾರಂಭವಾಗಿ ಬೆಳಗ್ಗೆ ಐದು ಗಂಟೆಗೆ ಮುಗಿಯುತ್ತಿತ್ತು. ಸುಮಾರು ನಾಲ್ಕು ಗಂಟೆ ಹೊತ್ತಿಗೆ ನಾಟಕ ಕ್ಲೈಮ್ಯಾಕ್ಸ್‌ಗೆ ಬಂದಿತ್ತು. ನನ್ನ ಮಟ್ಟಿಗೆ ಒಂದು ಪವಾಡ ನಡೆದುಹೋಗಿತ್ತು. ಇದ್ದಕ್ಕಿದ್ದಂತೆ ನನಗೆ ಅದು ಸುಂದರ ಎನಿಸಲಾರಂಭಿಸಿತು. ಅದರ ಪ್ರತಿ ಪಾತ್ರದ ಒಳಕ್ಕೆ ಹೋಗಲು ನನಗಾಯಿತು. ಇನ್ನೊಂದು ಪ್ರಪಂಚದೊಳಕ್ಕೆ ಪ್ರವೇಶಿಸಲು ನನಗೆ ಸಾಧ್ಯವಾಗಿತ್ತು. ಆ ಕ್ಷಣಕ್ಕೆ ನನ್ನ ಕರ್ನಾಟಕ ಸಂಗೀತ, ನನ್ನ ಜಾತಿ ಇವೆಲ್ಲಾ ಮರೆತುಹೋಗಿತ್ತು. ನನ್ನೊಳಗೆ ಅದೇನೋ ಆಯಿತು. ನನ್ನ ಅಸ್ಮಿತೆಯ ಹೊರೆಯನ್ನು ಕಳಚಿಕೊಂಡು ಹೊಸದೊಂದು ಸೌಂದರ್ಯಲೋಕವನ್ನು ಪ್ರವೇಶಿಸಲು ಸಾಧ್ಯವಾಗಿತ್ತು. ಸಂಬಂಧ ಎಂದರೆ ಇದು. ಇದು ಎಲ್ಲಾ ಸಂಬಂಧಗಳ ವಿಷಯಕ್ಕೂ ನಿಜ. ಸ್ನೇಹದಲ್ಲಾಗಲಿ, ಪ್ರೇಮದಲ್ಲಾಗಲಿ ಇಬ್ಬರು ವ್ಯಕ್ತಿಗಳು ಸ್ವಲ್ಪ ಹೊತ್ತಾದರೂ ಒಬ್ಬರು ಇನ್ನೊಬ್ಬರ ಲೋಕದೊಳಕ್ಕೆ ಪ್ರವೇಶಿಸಬೇಕು ಮತ್ತು ಪ್ರವೇಶಿಸಲು ಸಾಧ್ಯವಾಗಬೇಕು. ಇದು ಸಮಾಜ ಮತ್ತು ಕಲೆ ಎರಡರ ವಿಷಯಕ್ಕೂ ನಿಜ. ನನಗೆ ಕೂತ್ತು ಕಲಾವಿದರ ಸಮುದಾಯದೊಳಕ್ಕೆ ಮಾನಸಿಕವಾಗಿ ಪ್ರವೇಶಿಸಲು ಸಾಧ್ಯವಾಗಿತ್ತು. ಎರಡು ಕಲಾಪ್ರಕಾರಗಳೂ ಸುಂದರವಾಗಿವೆ ಎನಿಸಿತು. ಜೋಗಪ್ಪಗಳ ಜೊತೆ ಹಾಡುವಾಗಲೂ ಇದೇ ಆಗಿದ್ದು. ನಮ್ಮ ನಡುವಿನ ಕಂದರ ಮುಚ್ಚಿಕೊಳ್ಳಬೇಕೆಂಬ ತುಡಿತವಿತ್ತು. ಸಮಾಜದಲ್ಲಿ ಕೆಲವರು ಅಂಚಿನಲ್ಲೇ ಉಳಿದುಬಿಟ್ಟಿರುತ್ತಾರೆ. ಕೆಲವರು ಸ್ಥಿತಿವಂತರಾಗಿರುತ್ತಾರೆ. ಇದೊಂದು ಆಕಸ್ಮಿಕವಲ್ಲ. ಸಾಮಾಜಿಕ ರಚನೆಯೇ ಹಾಗಿದೆ. ಅಂಚಿನಲ್ಲಿ ಉಳಿದವರೊಂದಿಗೆ ಸಂಭಾಷಣೆ ಸಾಧ್ಯವಾಗಬೇಕು; ಮತ್ತು ಸಮಾನ ನೆಲೆಯಲ್ಲಿ ಸಾಧ್ಯವಾಗಬೇಕು. ಇದಕ್ಕೆ ದಾರಿ ಕಂಡುಕೊಳ್ಳಬೇಕು. ಇದರಿಂದ ನಾವು